# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 08.01.2019 ರಂದು 4.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ 49ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎಂ.ಎಸ್. ರಮಾನಂದ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಡಾ|| ಲಕ್ಷ್ಮೀ.ಎನ್**<br>ಮುಖ್ಯಸ್ಥರು, ಶಿಕ್ಷಣ ಶಾಸ್ತ್ರ ವಿಭಾಗ ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು | |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್,**<br>ನಿರ್ದೇಶಕರು – ಐ.ಟಿ. | **ಡಾ. ಶಲ್ವಪಿಳ್ಳೆ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

ಕುಲಸಚಿವರು | ಕುಲಪತಿಗಳು

ವಿಷಯ ಸಂಖ್ಯೆ: 49:01

**ವಿಷಯ: ಸರ್ಟಿಫಿಕೇಟ್, ಡಿಪ್ಲೊಮ ಮತ್ತು ಪಿ.ಜಿ. ಡಿಪ್ಲೊಮ ಕೋರ್ಸುಗಳ ಶುಲ್ಕದ ಅಧ್ಯಾದೇಶವನ್ನು ಅನುಮೋದಿಸುವ ಬಗ್ಗೆ**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ 2017ರ ನಿಯಮದಂತೆ ಸರ್ಟಿಫಿಕೇಟ್, ಡಿಪ್ಲೊಮ ಮತ್ತು ಪಿ.ಜಿ. ಡಿಪ್ಲೊಮ ಕೋರ್ಸುಗಳನ್ನು 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬೇಕಾಗಿರುತ್ತದೆ. ಭಾಗ – 08(1)(V) ಯು.ಜಿ.ಸಿ ದೂರಶಿಕ್ಷಣ ನಿಯಮಗಳ 2017ರ ಪ್ರಕಾರ ಸದರಿ ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯಗಳು ಪ್ರಾರಂಭಿಸಬೇಕಾದರೆ ಅಂತಹ ವಿಶ್ವವಿದ್ಯಾನಿಲಯಗಳ ಶಾಸನಬದ್ಧ ಪ್ರಾಧಿಕಾರಗಳು ಅಥವಾ ಮಂಡಳಿಗಳಿಂದ ಅನುಮೋದನೆ ಪಡೆದು ದೂರಶಿಕ್ಷಣ ಗುಣಮಟ್ಟವನ್ನು ಕಾಯ್ದುಕೊಂಡು ಪ್ರಾರಂಭ ಮಾಡಬಹುದು.

ಅದರಂತೆ ವಿಶ್ವವಿದ್ಯಾನಿಲಯು ಸರ್ಟಿಫಿಕೇಟ್ (15 ಕೋರ್ಸುಗಳು), ಡಿಪ್ಲೊಮ (12 ಕೋರ್ಸುಗಳು) ಮತ್ತು ಪಿ.ಜಿ. ಡಿಪ್ಲೊಮ (16 ಕೋರ್ಸುಗಳು) ಕೋರ್ಸುಗಳ ಆಧ್ಯಾದೇಶಗಳನ್ನು ಶಾಸನಬದ್ಧ ಪ್ರಾಧಿಕಾರಗಳಿಂದ ಅನುಮೋದನೆ ಪಡೆದುಕೊಂಡು ಕರ್ನಾಟಕ ಸರ್ಕಾರಕ್ಕೆ ಕಳುಹಿಸಲಾಗಿದೆ. ಪ್ರಸ್ತುತ ಈ ಕೋರ್ಸುಗಳನ್ನು ಆರಂಭ ಮಾಡಬೇಕಾದಲ್ಲಿ ಅವುಗಳ ಶುಲ್ಕವನ್ನು ಒಳಗೊಂಡಂತೆ ಆಧ್ಯಾದೇಶವನ್ನು ಕರಾಮುವಿ ಕಾಯಿದೆ 1992 ಮತ್ತು ದೂರಶಿಕ್ಷಣ ನಿಯಮಗಳು 2017 ಎರಡನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿರುವ ಈ ಆಧ್ಯಾದೇಶದ ಕರಡನ್ನು ಶೈಕ್ಷಣಿಕ ಮಂಡಳಿ, ವ್ಯವಸ್ಥಾಪನ ಮಂಡಳಿ ಹಾಗು ಹಣಕಾಸು ಸಮಿತಿ ಸಭೆಗಳಲ್ಲಿ ಅನುಮೋದನೆ ಪಡೆಯಲು ವಿಷಯ ಮಂಡಿಸಿದೆ.

**ತೀರ್ಮಾನ : ಸರ್ಟಿಫಿಕೇಟ್, ಡಿಪ್ಲೊಮ ಮತ್ತು ಪಿ.ಜಿ. ಡಿಪ್ಲೊಮ ಕೋರ್ಸುಗಳ ಶುಲ್ಕದ ಅಧ್ಯಾದೇಶವನ್ನು ಅನುಮೋದಿಸಲಾಯಿತು.**

------

ವಿಷಯ ಸಂಖ್ಯೆ: 49:02

**ವಿಷಯ: ಶಾಕೀರ ಬೇಗಂ, ನೋಂದಣಿ ಸಂಖ್ಯೆ 10061000311 ಈ ವಿದ್ಯಾರ್ಥಿಯ ಪರಿಷ್ಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರವನ್ನು ವಿತರಿಸುವ ಬಗೆಗೆ.**

******

ಶಾಕೀರ ಬೇಗಂ, ನೋಂದಣಿ ಸಂಖ್ಯೆ 10061000311 ಇವರು ಬಿ.ಎ ಪದವಿ ವ್ಯಾಸಂಗವನ್ನು ವಿಶ್ವವಿದ್ಯಾನಿಲಯದಲ್ಲಿ ಮಾಡಿದ್ದು, ಪ್ರಥಮ ವರ್ಷದಲ್ಲಿ ಐಚ್ಛಿಕ ವಿಷಯವಾಗಿ ಇತಿಹಾಸ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಆಯ್ಕೆ ಮಾಡಿಕೊಂಡು ಉತ್ತೀರ್ಣರಾಗಿದ್ದು, ತದನಂತರದ ದ್ವಿತೀಯ ಮತ್ತು ತೃತೀಯ ವರ್ಷದಲ್ಲಿ ಅರ್ಥಶಾಸ್ತ್ರ ಐಚ್ಛಿಕ ವಿಷಯದ ಬದಲಾಗಿ ಇಂಗ್ಲೀಷ್ ಐಚ್ಛಿಕ ವಿಷಯದಲ್ಲಿ ಪರೀಕ್ಷೆಯನ್ನು ಬರೆದು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿ 2014ರಲ್ಲಿ ಘಟಿಕೋತ್ಸವ ಪ್ರಮಾಣ ಪತ್ರವನ್ನು ಸಹ ಪಡೆದಿರುತ್ತಾರೆ.

ಸದರಿ ವಿದ್ಯಾರ್ಥಿಯು ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ವಿಶ್ವವಿದ್ಯಾನಿಲಯಕ್ಕೆ ಪದವಿಯ ನೈಜತೆಯ ಬಗೆಗೆ ಕೋರಿಕೊಂಡ ನಂತರ ಪರಿಶೀಲನಾ ಹಂತದಲ್ಲಿ ಪ್ರಥಮ ವರ್ಷದಲ್ಲಿ ಅರ್ಥಶಾಸ್ತ್ರ ವ್ಯಾಸಂಗ ಮಾಡಿ ತದನಂತರ ಇಂಗ್ಲೀಷ್ (ಐಚ್ಛಿಕ) ವಿಷಯವನ್ನು ಆಯ್ಕೆ ಮಾಡಿಕೊಂಡು ಫೆಬ್ರವರಿ/ಮಾರ್ಚ್ 2017ರ ಬಿಎ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದರಿಂದ ಗೊಂದಲ ಉಂಟಾಗಿ ನೈಜತೆ ಪ್ರಮಾಣ ಪತ್ರವನ್ನು ವಿತರಿಸಿರುವುದಿಲ್ಲ.

ಈ ಸಂಬಂಧದ ಮಾಹಿತಿಯನ್ನು ಕಡತದಲ್ಲಿ ದಾಖಲಿಸಿ ಅನುಮೋದನೆಯಂತೆ ದಿನಾಂಕ: 24.08.2018ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನು ಕೂಲಂಕಷವಾಗಿ ಮಂಡಿಸಲಾಗಿತ್ತು.

ಕುಲಸಚಿವರು

ಕುಲಪತಿಗಳು

- ವಿಷಯ ಸಂಖ್ಯೆ 47.11ರ ಶೈಕ್ಷಣಿಕ ಮಂಡಳಿಯಲ್ಲಿನ ನಡಾವಳಿಯನ್ನು ಚರ್ಚಿಸಿ "ಶಾಕೀರ ಬೇಗಂ ಎಂಬ ವಿದ್ಯಾರ್ಥಿಯು ಪುನಃ ಸ್ವ-ಇಚ್ಛೆಯಿಂದ ಇಂಗ್ಲೀಷ್ ಐಚ್ಛಿಕ ವಿಷಯದಲ್ಲಿ ಪರೀಕ್ಷೆ ಬರೆದು ತೇರ್ಗಡೆ ಹೊಂದಿರುವುದರಿಂದ ಗೊಂದಲ ಉಂಟಾಗಿರುತ್ತದೆ. ಅದನ್ನು ಪರಿಹರಿಸಲು ಅವರ ಅಂಕಪಟ್ಟಿಯನ್ನು ಹಿಂಪಡೆಯುವಂತೆ ತೀರ್ಮಾನವಾಗಿದೆ".
- ನಂತರ ಶೈಕ್ಷಣಿಕ ಮಂಡಳಿಯ ನಡಾವಳಿಯನ್ನು ದಿನಾಂಕ: 07.09.2018ರಂದು ನಡೆದ 151ನೇ ವ್ಯವಸ್ಥಾಪನಾ ಮಂಡಳಿಯಲ್ಲಿ ಅನುಮೋದನೆಯಾಗಿರುತ್ತದೆ.

ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆಯೆ, ಈ ಮೊದಲೇ ಮೂರು ವರ್ಷದ ಮೂಲ ಅಂಕಪಟ್ಟಿ ಮತ್ತು ಮೂಲ ಪದವಿ ಪ್ರಮಾಣ ಪತ್ರವನ್ನು ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಯು ಸಲ್ಲಿಸಿರುತ್ತಾರೆ.

ಪ್ರಸ್ತುತ, ಶಾಕೀರಾ ಬೇಗಂ ಇವರ ಪದವಿ ಸೈಜತೆ ಬಗೆಗೆ ಕ್ರಮ ವಹಿಸಲು ಇವರು ಫೆಬ್ರವರಿ/ಮಾರ್ಚ್ 2017ರಲ್ಲಿ ಬಿಎ ಪೂರಕ ಪರೀಕ್ಷೆಯಲ್ಲಿ ಪ್ರಥಮ ವರ್ಷದ ಇಂಗ್ಲೀಷ್ ಐಚ್ಛಿಕ ವಿಷಯದ ಉತ್ತೀರ್ಣ ಅಂಕವನ್ನು ಹಾಗೂ ತೃತೀಯ ಬಿಎ ಅಂಕಪಟ್ಟಿಗಳಲ್ಲಿ ದರ್ಜೆ ನಮೂದಿಸಿ ಅಂಕಪಟ್ಟಿ ನೀಡಲು, ಜೊತೆಗೆ ಮುಂಬರುವ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರವನ್ನು ಪರಿಷ್ಕರಿಸಿ ನೀಡಬೇಕಾಗುತ್ತದೆ. ಈ ಪ್ರಕ್ರಿಯೆಯನ್ನು ನಡೆಸಲು ಇನ್ನೊಮ್ಮೆ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ವಯ ಅನುಮೋದನೆ ಪಡೆಯುವ ಬಗ್ಗೆ 49ನೇ ಶೈಕ್ಷಣಿಕ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿ ಅನುಮೋದನೆ ಬಗ್ಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ: ಶಾಕೀರ ಬೇಗಂ, ನೋಂದಣಿ ಸಂಖ್ಯೆ 10061000311 ಇವರು ಉತ್ತೀರ್ಣಗೊಂಡ ಪದವಿ ಕೋರ್ಸ್‌ನ ಅಂಕಪಟ್ಟಿಯನ್ನು ಮತ್ತು ಪದವಿ ಪ್ರಮಾಣ ಪತ್ರವನ್ನು ನೀಡಲು ಅನುಮೋದಿಸಲಾಯಿತು.**

-----

**ವಿಷಯ ಸಂಖ್ಯೆ: 49:03**

**ವಿಷಯ: 2018-19ನೇ ಸಾಲಿನಲ್ಲಿ ವಿವಿಧ ಕೋರ್ಸ್/ವಿಷಯಗಳಿಗೆ ಪ್ರವೇಶಾತಿ ಪಡೆಯಲು ವಿಳಂಬವಾಗಿ ಬಂದಿರುವ ಅರ್ಜಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲು ಅನುಮೋದನೆ ಕೋರಿ**

***********

2018-19ನೇ ಸಾಲಿಗೆ ಸಂಬಂಧಿಸಿದಂತೆ ಯುಜಿಸಿಯು ಮಾನ್ಯತೆ ನೀಡಿರುವ ವಿವಿಧ ಕೋರ್ಸ್/ವಿಷಯಗಳಿಗೆ ದಿನಾಂಕ: 20.10.2018ರ ವರೆಗೆ ಪ್ರವೇಶಾತಿ ಮಾಡಿಕೊಳ್ಳಲಾಗಿದ್ದು, ಕೆಲವು ಅಭ್ಯರ್ಥಿಗಳು ನಿಗದಿತ ಸಮಯದಲ್ಲಿ ಪ್ರವೇಶಾತಿ ಶುಲ್ಕ ಪಾವತಿಸಿ ಅಂಚೆಯ ಮೂಲಕ ಅರ್ಜಿಗಳನ್ನು ಕಳುಹಿಸಿರುತ್ತಾರೆ. ಆದರೆ ನಮಗೆ ವಿಳಂಬವಾಗಿ ಅರ್ಜಿಗಳು ಬಂದಿರುತ್ತವೆ. ಈಗಾಗಲೇ ಯುಜಿಸಿಗೆ ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್/ವಿಷಯಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ವಿವರವನ್ನು ಸಲ್ಲಿಸಲಾಗಿದೆ. 59 ಅಭ್ಯರ್ಥಿಗಳ ಪ್ರವೇಶಾತಿಯನ್ನು ಮಾಡಿಕೊಂಡಿರುವುದಿಲ್ಲ. ಅಂತಹ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ.

## 2018-19 Admission Pending students

**BA**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | HARSHITH GM | 18010011318 | 4-09-2018 | PWD |
| 2 | RAJESHWARI R | 18010011317 | 20-10-2018 | SC |

ಕುಲಸಚಿವರು

ಕುಲಪತಿಗಳು

**B.LIB.IC**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | LOKESH GAONKAR | 180010030101 | 01-10-2018 | PWD |
| 2 | YASHAVANTHI K | 18010030102 | 19-09-2018 | PWD |

**MA (HINDI)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | KAMALAKXI RATIYAWAR | 18010060031 | 20-10-2018 | PWD |
| 2 | JYOTHI POL | 18010060032 | 25-09-2018 | SC |
| 3 | KAVERI | 18010060033 | 15-10-2018 | PWD |
| 4 | ASMA CHOUDHARI | 18010060034 | 17-10-2018 | OBC |

**MA (SANSKRIT)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | B.R SAINATH | 18010290009 | 20-10-2018 | PWD |
| 2 | HARISH DESHPANDE | 18010290010 | 20-10-2018 | PWD |
| 3 | SOWJANYA.J | 18010290011 | 20-10-2018 | PWD |
| 4 | N. PRASANNA | 18010290012 | 20-10-2018 | PWD |
| 5 | S. GOWRI SHANKARAN | 18010290013 | 20-10-2018 | PWD |
| 6 | BALASAB VIDHATE | 18010290014 | 20-10-2018 | PWD |
| 7 | KAVITHA S | 18010290014 | 20-10-2018 | PWD |

**MA (ENGLISH)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | RESHMA K R | 18010050271 | 20-10-2018 | PWD |
| 2 | SWETHA S D | 18010050272 | 19-09-2018 | PWD |
| 3 | MADHUGIRI | 18010050273 | 19-09-2018 | PWD |
| 4 | NAMANA B N | 18010050274 | 27-09-2018 | PWD |
| 5 | REVATHI S | 18010050275 | 26-09-2018 | SC |
| 6 | MOHANAKUMARI H G | 18010050276 | 27-09-2018 | PWD |
| 7 | JAGANNATHA R | 18010050277 | 20-10-2018 | SC |
| 8 | KUMARA G M | 18010050278 | 01-10-2018 | PWD |
| 9 | MAMATHA B C | 18010050279 | 27-09-2018 | PWD |
| 10 | RATHNAMMA K S | 18010050280 | 20-10-2018 | PWD |

ಕುಲಸಚಿವರು

ಕುಲಪತಿಗಳು

| | | | | |
|---|---|---|---|---|
| 11 | ASHVINI PATALI | 18010050281 | 20-10-2018 | PWD |
| 12 | AKANCHA TIWARI | 18010050282 | 28-09-2018 | PWD |
| 13 | SHREEKANT DASAR | 18010050283 | 10-09-2018 | SC |
| 14 | RENUKA | 18010050284 | 28-09-2018 | PWD |

**MA (SOCIOLOGY)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | MAHANTESH BYAHATTI | 1800130156 | 18-09-2018 | PWD |
| 2 | JAYASREE | 1800130157 | 12-09-2018 | PWD |
| 3 | MANJUNATHA T | 1800130158 | 19-09-2018 | PWD |
| 4 | JOOLI LAKSHMI MAHAJAN | 1800130159 | 19-09-2018 | SC |
| 5 | NINGAPPA HUGGI | 1800130160 | 20-09-2018 | PWD |
| 6 | PALITHA A D | 1800130161 | 19-09-2018 | PWD |
| 7 | LAXMI PUJARI | 1800130162 | 10-09-2018 | PWD |
| 8 | BABAJAN | 1800130163 | 19-09-2018 | PWD |
| 9 | BASAVARAJA PATIL | 1800130164 | 21-09-2018 | PWD |
| 10 | MANJUNATHA K M | 1800130165 | 29-09-2018 | ST |
| 11 | HARSHAVARDHAN | 1800130166 | 17-10-2018 | SC |
| 12 | NADAF | 1800130167 | 28-09-2018 | PWD |

**MA (ECONOMICS)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | DIVYA | 18010100333 | 10-10-2018 | PWD |
| 2 | SHRUTI HATTI | 18010100334 | 19-09-2018 | PWD |
| 3 | SHAYAMALA | 18010100335 | 20-10-2018 | PWD |
| 4 | VINAY | 18010100336 | 25-09-2018 | PWD |
| 5 | ASHIYA | 18010100337 | 20-10-2018 | OBC |

**MA (MCJ)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | NIHAR PA | 18010150049 | 17-09-2018 | PWD |
| 2 | BALIKAI VEERESH GURUSHIDDAPPA | 18010150050 | 19-09-2018 | PWD |

ಕುಲಸಚಿವರು

ಕುಲಪತಿಗಳು

**MA (HISTORY)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | DIVYA | 18010080448 | 24-09-2018 | PWD |
| 2 | BAHUBALI NARAWADE | 18010080449 | 20-10-2018 | PWD |

**MA (PUBLIC ADMINISTRATION)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | DR. SARAH HAQ | 18010120067 | 19-09-2018 | OBC |

**MSC (ES)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | SHIJIL KUMAR P P | 18010170036 | 26-09-2018 | PWD |
| 2 | NIRUPAMA C P | 18010170037 | 07-09-2018 | PWD |
| 3 | PUNEET N AMBLIYAVAR | 18010170038 | 28-09-2018 | PWD |
| 4 | SANGEETHA R VERNEKAR | 18010170039 | 27-09-2018 | PWD |
| 5 | ADITH D G | 18010170040 | 07-09-2018 | PWD |

**MSC (MICROBIOLOGY)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | PRABHULINGAYYA BHIXAVATIMATH | 18010260019 | 20-10-2018 | PWD |

**MSC (PSYCHOLOGY)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | GURUPADA K.P | 18010280032 | 20-10-2018 | PWD |

**MSC (MATHEMATICS)**

| Sl.No | Name of the Student | Enrolment No | Date of Admisson | Category SC/ST/OBC/PWD*/EWS** |
|---|---|---|---|---|
| 1 | AVINASH M M | 18010250032 | 20-10-2018 | ST |

ಕುಲಸಚಿವರು

ಕುಲಪತಿಗಳು

| Sl.No. | COURSE | STUDENT NOS. |
|---|---|---|
| 1. | BA | 2 |
| 2. | B.LIB.IC | 2 |
| 3. | MA HINDI | 4 |
| 4. | MA SANSKRIT | 7 |
| 5. | MA ENGLISH | 14 |
| 6. | MA SOCIOLOGY | 12 |
| 7. | MA ECONOMICS | 5 |
| 8. | MA MCJ | 2 |
| 9. | MA HISTORY | 2 |
| 10. | MA PUB ADMISNISTRATION | 1 |
| 11. | MSC (ES) | 5 |
| 12. | MSC (MICRO BIOLOGY) | 1 |
| 13. | MSC (PSYCHOLOGY) | 1 |
| 14. | MSC (MATHEMATICS) | 1 |
| | TOTAL | 59 |

ಸದರಿ ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ಪ್ರವೇಶಾತಿ ಶುಲ್ಕ ಪಾವತಿಸಿದ್ದು, ಅರ್ಜಿಗಳು ಅಂಚೆ ಮುಖೇನ ವಿವಿ ನಿಲಯಕ್ಕೆ ತಲುಪುವುದು ವಿಳಂಬವಾಗಿರುತ್ತದೆ. ಸದರಿ ಅರ್ಜಿಗಳು ಪರಿಶೀಲಿಸಿ ಇಡಲಾಗಿದ್ದು, ಪ್ರವೇಶಾತಿಗೆ ಅಂಗೀಕರಿಸಬೇಕಾಗಿರುತ್ತದೆ. ಆಂತರಿಕ ನಿಬಂಧನೆಗಳನ್ನು ಸಲ್ಲಿಸಲು ದಿನಾಂಕ 31.1.2019ರಂದು ಕಡೆಯ ದಿನಾಂಕವಾಗಿರುವುದರಿಂದ ತಕ್ಷಣ ಸಿದ್ಧಪಾಠಗಳನ್ನು ಕಳುಹಿಸಬೇಕಾಗಿರುತ್ತದೆ. ಆದ್ದರಿಂದ 59 ವಿದ್ಯಾರ್ಥಿಗಳ ವಿವಿಧ ವಿಷಯಗಳ ಪ್ರವೇಶಾತಿ ಅರ್ಜಿಯನ್ನು ಪ್ರವೇಶಾತಿಗೆ ಅಂಗೀಕರಿಸಿ ಸದರಿ ಮಾಹಿತಿಯನ್ನು ಯುಜಿಸಿಗೆ ಕಳುಹಿಸುವ ಸಂಬಂಧದ ಪ್ರಸ್ತಾವನೆಯನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕೆ ವಿಷಯ ಮಂಡಿಸಿದೆ.

ತೀರ್ಮಾನ: 59 ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪ್ರವೇಶಾತಿ ನಿಬಂಧನೆಗಳ ಪ್ರಕಾರ ಪ್ರವೇಶಾತಿ ಪಡೆದು ಸಕಾಲದಲ್ಲಿ ನಿಗದಿತ ಶುಲ್ಕವನ್ನು ಬ್ಯಾಂಕಿನ ಮುಖಾಂತರ ನಿಗದಿತ ದಿನಾಂಕದೊಳಗೆ ಪಾವತಿಸಿರುವುದರಿಂದ, ವಿಳಂಬವಾಗಿ ಬಂದಿರುವ ಅರ್ಜಿಗಳನ್ನು ಪ್ರವೇಶಾತಿಗೆ ಪರಿಗಣಿಸಲು ಅದಕ್ಕೆ ಪೂರಕವಾದ ಕ್ರಮ ವಹಿಸಲು ಹಾಗೂ ಇಂತಹ ವಿದ್ಯಾರ್ಥಿಗಳ ವಿವರಗಳನ್ನು ಯು.ಜಿ.ಸಿ.ಗೆ ರವಾನಿಸಲು ತೀರ್ಮಾನಿಸಲಾಯಿತು.

-----

ವಿಷಯ ಸಂಖ್ಯೆ: 49:04

ವಿಷಯ: ಪ್ರಥಮ ಪಿ.ಯು.ಸಿ ವ್ಯಾಸಂಗ ಮಾಡದೇ ನೇರವಾಗಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿ ವಿವಿಧ ಕೋರ್ಸ್/ವಿಷಯಗಳಿಗೆ 2018-19 ನೇ ಸಾಲಿನಲ್ಲಿ ಪ್ರವೇಶಾತಿ ಕೋರಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಅನುಮೋದನೆ ನೀಡುವ ಬಗ್ಗೆ

**************

2018-19 ನೇ ಸಾಲಿಗೆ ಸಂಬಂಧಿಸಿದಂತೆ ಯುಜಿಸಿಯು ಮಾನ್ಯತೆ ನೀಡಿರುವ ವಿವಿಧ ಕೋರ್ಸ್/ವಿಷಯಗಳಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಮಾಡಿಕೊಳ್ಳಲಾಗಿದೆ. ಯುಜಿಸಿ ಅಧಿಸೂಚನೆಯ ಪಾರ್ಟ್ – 1 ರ 2 (i) ಪ್ರಕಾರ 10+2 ಶಾಲಾಧ್ಯಯನ ಮಾಡಬೇಕೆಂಬ ನಿಯಮವಿರುತ್ತದೆ.

ಕುಲಸಚಿವರು

ಕುಲಪತಿಗಳು

(l) "Higher education" means such education, imparted by means of conducting regular classes or through distance education systems, beyond twelve years of schooling leading to the award of the degree or certificate or diploma or postgraduate diploma: (ಪ್ರತಿಯನ್ನು ಲಗತ್ತಿಸಿದೆ.)

ಈ ನಿಯಮದ ಪ್ರಕಾರ ಪ್ರಥಮ ಪಿಯುಸಿ ಅಧ್ಯಯನ ಮಾಡದೆ ನೇರವಾಗಿ ದ್ವಿತೀಯ ಪಿಯುಸಿಯನ್ನು ಖಾಸಗಿಯಾಗಿ ಮಾಡಿದವರನ್ನು ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿಗೆ ಪರಿಗಣಿಸಲಾಗಿಲ್ಲ.

ಆದರೆ ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ಆದೇಶ ಸಂಖ್ಯೆ: ಇಡಿ 114 ಟಿಪಿಯು 2014, ದಿನಾಂಕ 13.1.2015 ರ "ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯು ನಡೆಸುವ ದ್ವಿತೀಯ ಪಿ.ಯು.ಸಿ. ಪರೀಕ್ಷೆಗೆ ನೇರವಾಗಿ - ಖಾಸಗಿಯಾಗಿ ನೊಂದಾಯಿಸಿ ಪರೀಕ್ಷೆಗೆ ಹಾಜರಾಗಿ ಉತ್ತೀರ್ಣರಾಗುವ ವಿದ್ಯಾರ್ಥಿಗಳು ಎರಡು ವರ್ಷದ ಪಿಯುಸಿಗೆ ತತ್ಸಮಾನವೆಂದು ಆದೇಶಿಸಿದೆ" (ಪ್ರತಿಯನ್ನು ಲಗತ್ತಿಸಿದೆ). ಇದು ಯುಜಿಸಿ ನಿಗದಿಪಡಿಸಿರುವ ಮೇಲ್ಕಂಡ ಪ್ರವೇಶಾತಿ ನಿಬಂಧನೆಗೆ ಸಮಾನವಾಗಿರುತ್ತದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ದ್ವಿತೀಯ ಪಿಯುಸಿಯನ್ನು ಖಾಸಗಿಯಾಗಿ ಪರೀಕ್ಷೆ ಬರೆದು ಉತ್ತೀರ್ಣರಾಗಿ ನಿಗದಿತ ಸಮಯದಲ್ಲಿ ಪ್ರವೇಶಾತಿ ಶುಲ್ಕ ಪಾವತಿಸಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಕೋರ್ಸ್/ವಿಷಯಗಳಿಗೆ ಪ್ರವೇಶಾತಿ ಪಡೆಯಲು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಪ್ರವೇಶಾತಿಯ ಸಂಬಂಧ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ:** ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 114 ಟಿಪಿಯು 2014, ದಿನಾಂಕ: 13.1.2015 ನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು. ಸದರಿ ಆದೇಶದಂತೆ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಹೊಂದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಪ್ರವೇಶಾತಿಗೆ ಪರಿಗಣಿಸಲು ಹಾಗೂ ಇಂತಹ ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ಸಿದ್ಧಪಡಿಸಿ ಯು.ಜಿ.ಸಿ. ಗೆ ಕಳುಹಿಸಲು ಅನುಮೋದಿಸಲಾಯಿತು.

------

ವಿಷಯ ಸಂಖ್ಯೆ : 49:05

**ವಿಷಯ:** 2018-19ನೇ ಸಾಲಿನಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ವಿವರವನ್ನು ಶೈಕ್ಷಣಿಕ ಮಂಡಳಿಯ ಸಭೆಯ ಅವಗಾಹನೆಗೆ ಮಂಡಿಸುತ್ತಿರುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-(1)ರ ಆದೇಶದಲ್ಲಿ 2018-19ನೇ ಸಾಲಿಗೆ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಯು.ಜಿ.ಸಿ.ಯು ಮಾನ್ಯತೆ ನೀಡಿರುವ ಕೋರ್ಸ್‌ಗಳಿಗೆ/ ವಿಷಯಗಳಿಗೆ ಪ್ರವೇಶಾತಿ ಮಾಡಿಕೊಳ್ಳುವ ಸಂಬಂಧ ಉಲ್ಲೇಖ-(2) ರನ್ವಯ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ ಮೈಸೂರು ಕೇಂದ್ರ ಕಛೇರಿ ಮತ್ತು ಪ್ರಾದೇಶಿಕ ಕೇಂದ್ರ ಕಛೇರಿಗಳಲ್ಲಿ ಪ್ರವೇಶಾತಿ ಹೊಂದಿರುವ ವಿಷಯವಾರು ವಿದ್ಯಾರ್ಥಿಗಳ ಅಂಕಿ ಅಂಶಗಳ ವಿವರವನ್ನು ಇದರೊಂದಿಗೆ ಲಗತ್ತಿಸಿ ಶೈಕ್ಷಣಿಕ ಮಂಡಳ ಸಭೆಯ ಅವಗಾಹನೆಗಾಗಿ ಮತ್ತು ಮಾಹಿತಿಗಾಗಿ ಮಂಡಿಸಿದೆ.

ಕುಲಸಚಿವರು

ಕುಲಪತಿಗಳು

## SUBJECT WISE STUDENTS COUNT

### UG COURSES

| S.NO | COURSES | STUDENTS COUNT |
|---|---|---|
| 1. | B.A | 3145 |
| 2. | B.COM | 551 |
| 3. | B.LIB.IC | 267 |
| | TOTAL | 3963 |

### PG COURSES

| S.NO | COURSES | STUDENTS COUNT |
|---|---|---|
| 1. | M.A KANNADA | 1405 |
| 2. | M.A ENGLISH | 777 |
| 3. | M.A HINDI | 107 |
| 4. | M.A SANSKRIT | 53 |
| 5. | M.A URDU | 9 |
| 6. | M.A HISTORY | 1052 |
| 7. | M.A POLITICAL SCIENCE | 704 |
| 8. | M.A ECONOMICS | 699 |
| 9. | M.A SOCIOLOGY | 437 |
| 10. | M.A PUBLIC ADMINISTRATION | 141 |
| 11. | M.A MASS COMMUNICATION & JOURNALISM | 107 |
| 12. | M.A ANCIENT HISTORY & ARCHEOLOGY | 37 |
| 13. | M.COM | 1614 |
| 14. | M.LIB.I.Sc | 14 |
| | TOTAL | 7208 |

### SCIENCE COURSES

| S.NO | COURSES | STUDENTS COUNT |
|---|---|---|
| 1. | MSc ENVIRONMENTAL SCIENCE | 105 |
| 2. | MSc PSYCHOLOGY | 90 |
| 3. | MSc MATHEMATICS | 83 |
| 4. | MSc COMPUTER SCIENCE | 61 |
| 5. | MSc CND | 49 |
| 6. | MSc CHEMISTRY | 55 |
| 7. | MSc PHYSICS | 49 |
| 8. | MSc GEOGRAPHY | 41 |
| 9. | MSc MICRO BIOLOGY | 39 |
| 10. | MSc BIOCHEMISTRY | 9 |
| 11. | MSc BIOTECHONOLOGY | 6 |
| 12. | MSc INFORMATION SCIENCE | 1 |
| | TOTAL | 588 |

ಕುಲಸಚಿವರು

ಕುಲಪತಿಗಳು

GRAND TOTAL

| COURSES | STUDENTS COUNT |
|---|---|
| UG COURSES | 3963 |
| PG COURSES | 7208 |
| SCIENCE COURSES | 588 |
| TOTAL | 11759 |

ತೀರ್ಮಾನ : 1. ಕೆಲವು ಸ್ನಾತಕ ಕೋರ್ಸ್‌ಗಳ ಐಚ್ಛಿಕ ವಿಷಯದ ಪ್ರವೇಶಾತಿ ಸಂಖ್ಯೆಯು ಕಡಿಮೆಯಾಗಿದ್ದು ಅಂತಹ ಕೋರ್ಸ್‌ಗಳ ಭಾಷಿಕ ಮತ್ತು ಐಚ್ಛಿಕ ವಿಷಯಗಳನ್ನು ಜೊತೆಯಾಗಿ, ಒಂದು ಕೋರ್ಸ್ ಪರಿಗಣಿಸಲು ಹಾಗೂ ಇಂತಹ ಸಂದರ್ಭಗಳಲ್ಲಿ ಯು.ಜಿ.ಸಿ. ನಿಯಮದ ಪ್ರಕಾರ ಸಂಬಂಧಪಟ್ಟ ವಿಭಾಗಕ್ಕೆ ಹೆಚ್ಚುವರಿ ಅಧ್ಯಾಪಕರುಗಳ ಬೇಡಿಕೆಯನ್ನು ಪರಿಗಣಿಸದಿರಲು ತೀರ್ಮಾನಿಸಲಾಯಿತು.

2. 2018-19ರ ಜುಲೈ Cycle ನಲ್ಲಿ ಹಲವು ಕೋರ್ಸ್‌ಗಳಲ್ಲಿ ಪ್ರವೇಶಾತಿಯ ಸಂಖ್ಯೆ ತುಂಬಾ ಕಡಿಮೆ ಇರುವುದನ್ನು ಗಮನಿಸಲಾಯಿತು 2012-13 ಮತ್ತು 2013-14ರ ಶೈಕ್ಷಣಿಕ ವರ್ಷಗಳಲ್ಲಿ ಚಾಲ್ತಿಯಲ್ಲಿದ್ದ (ವಿವರಣಾ ಪುಸ್ತಕ) ನಿಯಮ ಅಂದರೆ, ಒಂದು ಕೋರ್ಸ್‌ಗೆ ಕನಿಷ್ಠ 20 ಸಂಖ್ಯೆಗಿಂತ ಕಡಿಮೆ ಪ್ರವೇಶಾತಿಯಾಗಿದ್ದಲ್ಲಿ ಅಂತಹ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕವನ್ನು ಮರುಪಾವತಿಸುವ ನಿಯಮವನ್ನು ಶೈಕ್ಷಣಿಕ ಮಂಡಳಿಯು ಗಮನಿಸಲಾಯಿತು.

ಅದರಂತೆ, 2018-19ನೇ ಶೈಕ್ಷಣಿಕ ವರ್ಷದಲ್ಲಿ ಪ್ರವೇಶಾತಿಯಾಗಿರುವ ಸ್ನಾತಕೋತ್ತರ ಕೋರ್ಸ್‌ಗಳಲ್ಲಿನ ಪ್ರವೇಶಾತಿ ಸಂಖ್ಯೆ 20ಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಶುಲ್ಕವನ್ನು ಮರುಪಾವತಿಸಲು ಅನುಮೋದಿಸಿತು.

3. ಅಂತಹ ಕೋರ್ಸ್‌ಗಳ ಪ್ರವೇಶಾತಿಯ ಸಂಖ್ಯೆಯು ಮೂರು ವರ್ಷಗಳ ನಂತರವು ಕನಿಷ್ಠ 20 ಕ್ಕಿಂತಲೂ ಹೆಚ್ಚಾಗದಿದ್ದಲ್ಲಿ, ಸಂಬಂಧಿಸಿದ ಕೋರ್ಸ್‌ಗಳನ್ನು ಸ್ಥಗಿತಗೊಳಿಸಲು ಶಿಫಾರಸ್ಸು ಮಾಡಿತು.

4. ಮುಂಬರುವ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಕೋರ್ಸ್‌ನ ಪ್ರವೇಶಾತಿ ಸಂಖ್ಯೆಯು ಕನಿಷ್ಠ 20 ಎಂಬ ನಿಯಮವನ್ನು ವೈಜ್ಞಾನಿಕವಾಗಿ ನಿಗದಿಗೊಳಿಸಿ ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.

-----

<u>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮಂಡಿಸಲಾದ ಇತರೆ ವಿಷಯಗಳು :-</u>

ವಿಷಯ ಸಂಖ್ಯೆ **49:06**

ವಿಷಯ:–**2018–19**ನೇ ಶೈಕ್ಷಣಿಕ ಸಾಲಿನ ಶಿಕ್ಷಣಕ್ರಮಗಳಿಗೆ ವಾರಾಂತ್ಯ ಸಮಾಲೋಚನೆ ಮತ್ತು ಸಂಪರ್ಕಕಾರ್ಯಕ್ರಮಗಳ ನಡೆಸುವಿಕೆ ಕುರಿತು.

*****

1. ಯು.ಜಿ.ಸಿ ಮುಕ್ತ ಮತ್ತು ದೂರ ಶಿಕ್ಷಣ ನಿಯಮಾವಳಿ–2017 ರ ಪ್ರಕಾರ ಸ್ನಾತಕ ಶಿಕ್ಷಣಕ್ರಮಗಳಿಗೆ ವಾರಾಂತ್ಯ ಸಮಾಲೋಚನೆ ಕಾರ್ಯಕ್ರಮ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ಸಂಪರ್ಕ ಕಾರ್ಯಕ್ರಮವನ್ನು ಕರಾಮುವಿ–2018–19 ರ ಶೈಕ್ಷಣಿಕ ವೇಳಾ ಪಟ್ಟಿಯ ಪ್ರಕಾರ, ಫೆಬ್ರವರಿ–2019 ರಿಂದ ಮೇ–2019 ರವರೆಗೆ ನಡೆಸಬೇಕಿರುತ್ತದೆ.

ಕುಲಸಚಿವರು

ಕುಲಪತಿಗಳು

2. ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳ ವಾರಾಂತ್ಯ ಸಮಾಲೋಚನೆ ಮತ್ತು ಸಂಪರ್ಕ ಕಾರ್ಯಕ್ರಮಗಳಲ್ಲಿ ಸಮಾಲೋಚಕರಾಗಿ ಭಾಗವಹಿಸುವ ವಿಷಯ ತಜ್ಞರನ್ನು 'ಸಮಾಲೋಚಕರ ಕೈಪಿಡಿ (Counselors' Manual)' ಅನ್ವಯ ನಿಯೋಜನೆ ಮಾಡುವ ಬಗ್ಗೆ ಕ್ರಮಕೈಗೊಳ್ಳುವ ಕುರಿತು.
3. ನಿಯೋಜನೆಗೊಂಡ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳ ಸಮಾಲೋಚಕರಿಗೆ ದೂರಶಿಕ್ಷಣ ವೈಶಿಷ್ಟ್ಯ, ಅಧ್ಯಯನ ಸಾಮಗ್ರಿಯ ಸ್ವರೂಪ, ಸಂಪರ್ಕ ಕಾರ್ಯಕ್ರಮಗಳ ನಡೆಸುವ ಸಮಾಲೋಚನೆಯ ಸ್ವರೂಪ ಮತ್ತು ಆಂತರಿಕ ನಿಬಂಧಗಳ ಮೌಲ್ಯಮಾಪನ ವಿಧಾನ ಮೊದಲಾದ ಮುಖ್ಯ ವಿಷಯಗಳನ್ನು ಕುರಿತು ಪ್ರವೇಶ –ಪರಿಚಯಾತ್ಮಕ ಕಾರ್ಯಕ್ರಮ (Induction Cum Orientation Programme) ನಡೆಸುವ ಬಗ್ಗೆ.
4. ಸ್ನಾತಕೋತ್ತರ ಶಿಕ್ಷಣಕ್ರಮಗಳಿಗೆ ಮೈಸೂರು ಕೇಂದ್ರ ಸ್ಥಾನ ಹೊರತುಪಡಿಸಿ ಹೊರಗಿನ ಸ್ಥಳಗಳಲ್ಲಿ ನಡೆಯುವ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳಿಗೆ ವಿವಿ ಕಛೇರಿ ಆದೇಶದ ಪ್ರಕಾರ ಪಾವತಿಸಿದ್ದ, 'ವಿಷಯ ಸಂಯೋಜಕರ ಸಂಭಾವನೆ'ಯು ಹಲವು ವರ್ಷಗಳಿಂದ ಆಕ್ಷೇಪಣೆಗೆ ಒಳಗಾಗುತ್ತಿದೆ.ಈ ಸಂಭಾವನೆಯನ್ನು ಮುಂದುವರಿಸುವ ಮತ್ತು ಆಕ್ಷೇಪಣಾ ರಹಿತವಾಗಿ ಮಾಡುವ ಕ್ರಮ ಕುರಿತು.
5. ಸ್ನಾತಕ ಮತ್ತು ಸ್ನಾತಕೋತ್ತರ ಶಿಕ್ಷಣಕ್ರಮಗಳ ವಾರಾಂತ್ಯ / ಸಂಪರ್ಕ ಕಾರ್ಯಕ್ರಮಗಳ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸುವ ಸಂಬಂಧ ಪರಿನಿಯಮ (Statute) ಸಿದ್ಧಪಡಿಸುವುದು.
6. ಹೊರಗಿನ ಸ್ಥಳಗಳಲ್ಲಿ ನಡೆಯುವ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳ ಈ ಕೆಳಕಂಡ ಬೇಡಿಕೆಗಳನ್ನು ಚರ್ಚಿಸಿ ಇತ್ಯರ್ಥಗೊಳಿಸುವ ಕುರಿತು, ಮಾನ್ಯ ಕುಲಸಚಿವರು ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸುವ ಕುರಿತು.

   - ಸಂಪರ್ಕ ಕಾರ್ಯಕ್ರಮ ನಿಗದಿಪಡಿಸಲು ವಿಷಯವೊಂದಕ್ಕೆ ಕನಿಷ್ಟ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಸಂಖ್ಯೆಯನ್ನು ನಿಗದಿಪಡಿಸುವ ಬಗ್ಗೆ.
   - 2018–19ನೇ ಸಾಲಿಗೆ ನಿಗದಿಪಡಿಸಬೇಕಿರುವ ಸ್ನಾತಕೋತ್ತರ ಶಿಕ್ಷಣಕ್ರಮಗಳ ಸಂಪರ್ಕಕಾರ್ಯಕ್ರಮಗಳ ಕೇಂದ್ರಗಳು.
   - ಕೇಂದ್ರ ಸ್ಥಾನ ಮೈಸೂರಿನಲ್ಲಿ ಸ್ನಾತಕ ಶಿಕ್ಷಣಕ್ರಮಗಳಿಗೆ ವಾರಾಂತ್ಯ ಸಮಾಲೋಚನೆ ನಡೆಯುವ ತಿಂಗಳುಗಳಲ್ಲಿಯೇ ಹೊರಗಿನ ಕೇಂದ್ರಗಳಲ್ಲಿ ಸ್ನಾತಕೋತ್ತರ ಶಿಕ್ಷಣಕ್ರಮಗಳ ಸಂಪರ್ಕ ಕಾರ್ಯಕ್ರಮಗಳು ನಡೆಯಲಿರುವುದರಿಂದ, ಅಧ್ಯಾಪಕರ ಕೊರತೆ ಕಂಡುಬರುವ ವಿಷಯಗಳಿಗೆ ಸ್ನಾತಕ ಸಮಾಲೋಚನೆಯನ್ನು ನಡೆಸಲು ಮೈಸೂರು ವ್ಯಾಪ್ತಿಯ ಸ್ಥಳೀಯ ವಿಷಯ ತಜ್ಞರನ್ನು ಅಗತ್ಯ ಸಂಖ್ಯೆಯಲ್ಲಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆದು ನಿಯೋಜನೆ ಮಾಡಿಕೊಳ್ಳುವ ಬಗ್ಗೆ.
   - ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧ್ಯಾಪಕರುಗಳಿಗೆ ನೀಡುವ ಸಂಭಾವನೆಯಲ್ಲಿ ಹೆಚ್ಚಳ ಮಾಡುವುದು.

ಕುಲಸಚಿವರು

ಕುಲಪತಿಗಳು

- ➢ ಹೊರಗಿನ ಕೇಂದ್ರಗಳ ಸಂಪರ್ಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅಧ್ಯಾಪಕರಿಗೆ ಭಾನುವಾರ ಮತ್ತು ಸಾರ್ವಜನಿಕ ರಜಾ ದಿನಗಳಂದು ಕರ್ತವ್ಯ ನಿರ್ವಹಿಸಿದ ಸಂಬಂಧ 'ಪರಿಹಾರ ರಜೆ' ನೀಡುವ ಕೋರಿಕೆ ಬಗ್ಗೆ.

ಈ ಮೇಲ್ಕಂಡ ವಿಷಯಗಳನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಕೋರಿದೆ.

ತೀರ್ಮಾನ : ಕ್ರಮ ಸಂಖ್ಯೆ 2 ಮತ್ತು 3 ಅನ್ನು ಕಾರ್ಯಗತಗೊಳಿಸಲು ಶಿಫಾರಸ್ಸು ಮಾಡಲಾಯಿತು.
ಕ್ರಮ ಸಂಖ್ಯೆ: 1, 4 ರಿಂದ 6ರ ಬಗ್ಗೆ ಸ್ಪಷ್ಟವಾಗಿ ಪರಿಶೀಲಿಸಿ ಅಗತ್ಯ ಶಿಫಾರಸ್ಸನ್ನು ಮಾಡಲು ಡೀನ್ (ಅಧ್ಯಯನ ಕೇಂದ್ರ) ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲು ಒಪ್ಪಲಾಯಿತು.

ವಿಷಯ ಸಂಖ್ಯೆ: 49:07

ವಿಷಯ : ಇನ್‌ಹೌಸ್ ಶಿಕ್ಷಣಕ್ರಮಗಳು 1996 ರಿಂದ 2010 ರವರೆಗೆ ವಿಶ್ವವಿದ್ಯಾನಿಲಯಗಳು ನೀಡಿರುವ ಅಂಕಪಟ್ಟಿಗಳ ತಿದ್ದುಪಡಿ ಹಾಗೂ ಪ್ರಮಾಣ ಪತ್ರಗಳ ವಿತರಿಸಿರುವ ಹಾಗೂ 2010-11 ರಿಂದ ಅಂಕಪಟ್ಟಿ ತಿದ್ದುವಿಕೆ ಮತ್ತು ಪ್ರಮಾಣ ಪತ್ರವನ್ನು ಪ್ರವೇಶಾತಿ ಅನುಮೋದನೆ ಪಟ್ಟಿ ಮತ್ತು ವಿಭಾಗದ Tabulation Ledgers ಗಳನ್ನು ಪರಿಶೀಲಿಸಿ ಕ್ರಮ ವಹಿಸುವ ಬಗ್ಗೆ.

******

ದಿನಾಂಕ: 07.09.2018 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 151ನೇ ಸಭೆಯ ತೀರ್ಮಾನದಂತೆ (ವಿ.ಸಂ.151.21) ಆದೇಶ ಸಂಖ್ಯೆ: ಕರಾಮುವಿ/ಆರ್‌ಪಿಎ/56/18-19, ದಿನಾಂಕ: 26-10-2018ರ ಪ್ರಕಾರ ವಿಶ್ವವಿದ್ಯಾನಿಲಯದ ವಲಸೆ ಪ್ರಮಾಣ ಪತ್ರ, ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ, ನೈಜತೆ ಪ್ರಮಾಣ ಪತ್ರ ಮತ್ತು ಪ್ರತಿಲಿಪಿಗಳು (Transcript) ಇತ್ಯಾದಿಗಳನ್ನು ವಿತರಿಸುವ ಕ್ರಮಗಳ ಬಗ್ಗೆ ವಿಶ್ವವಿದ್ಯಾನಿಲಯ ಆದೇಶಿಸಿದ್ದು, ಸದರಿ ಉಲ್ಲೇಖಿತ ಆದೇಶವು ಸಹಭಾಗಿತ್ವ ಸಂಸ್ಥೆಗಳ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳ ವಿತರಣೆಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ಕುಲಸಚಿವ (ಪರೀಕ್ಷಾಂಗ) ಸಭೆಯ ಗಮನಕ್ಕೆ ತಂದರು.

ಮುಂದುವರೆದು ಕುಲಸಚಿವ (ಪರೀಕ್ಷಾಂಗ) ಮಾತನಾಡುತ್ತಾ, ಇನ್‌ಹೌಸ್ ಶಿಕ್ಷಣಕ್ರಮಗಳ ಅಂಕಪಟ್ಟಿ ತಿದ್ದುಪಡಿ ಮತ್ತು ಪ್ರಮಾಣ ಪತ್ರಗಳನ್ನು ವಿತರಿಸುವ ಸಂದರ್ಭದಲ್ಲಿ ಪರೀಕ್ಷಾಂಗ ವಿಭಾಗವು ವಿದ್ಯಾರ್ಥಿಗಳ ಪ್ರವೇಶಾತಿ, ಪ್ರವೇಶಾತಿ ನವೀಕರಣ ನಂತರ ಪರೀಕ್ಷೆ ತೆಗೆದುಕೊಂಡ ಬಗೆಗಿನ ತಃಖ್ತೀಕರಣ ದಾಖಲೆಗಳನ್ನು ಪರಿಶೀಲಿಸಬೇಕಾಗಿರುತ್ತದೆ ಎಂದು ತಿಳಿಸಿದರು. ಆದರೆ, 1996 ರಿಂದ 2010 ರವರೆಗಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ನವೀಕರಣದ ದಾಖಲೆಗಳು ಪ್ರವೇಶಾತಿ ವಿಭಾಗದಲ್ಲಿ ನೀಡಿರುವ ಹಲವಾರು ದಾಖಲೆಗಳು ಪರಿಶೀಲನಾ ಸಂದರ್ಭದಲ್ಲಿ ಪರಿಪೂರ್ಣವಾಗದಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸುತ್ತಾ, ಇಂತಹ ಪ್ರಕರಣಗಳನ್ನು ಪರೀಕ್ಷಾಂಗ ವಿಭಾಗದ ತಃಖ್ತೀಕರಣ ಅಂಕಗಳ ವಹಿ (Tabulation Ledgers) ದಾಖಲೆಗಳನ್ನು ಮಾತ್ರ ಪರಿಶೀಲಿಸಿ, ಅದರ ಆಧಾರದ ಮೇಲೆ ಅಂಕಪಟ್ಟಿ ತಿದ್ದುಪಡಿ / ಪ್ರಮಾಣ ಪತ್ರಗಳನ್ನು ವಿತರಿಸಬೇಕಾಗುತ್ತದೆ ಎಂದು ಮನವರಿಕೆ ಮಾಡಿದರು.

2010-2011 ರಿಂದ ಪ್ರಸ್ತುತವರೆಗಿನ ವಿದ್ಯಾರ್ಥಿಗಳ ಪರೀಕ್ಷಾ ಅಂಕಪಟ್ಟಿ ತಿದ್ದುಪಡಿ/ಪ್ರಮಾಣ ಪತ್ರಗಳನ್ನು ವಿತರಿಸುವ ಸಂಬಂಧ ಪರಿಶೀಲನಾ ಹಂತದಲ್ಲಿ ಪ್ರವೇಶಾತಿ ವಿಭಾಗದಿಂದ ಪ್ರವೇಶಾತಿ ಅನುಮೋದನಾ ಪಟ್ಟಿ ದೃಢೀಕರಣವನ್ನು ಪಡೆದು ತದನಂತರ, ಪರೀಕ್ಷಾಂಗ ವಿಭಾಗದಲ್ಲಿನ ತಃಖ್ತೀಕರಣ ವಹಿ (Tabulation Ledgers) ವಿದ್ಯಾರ್ಥಿಗಳ ಪರೀಕ್ಷಾ ವಿವರವನ್ನು ಪರಿಶೀಲಿಸಿ, ದೃಢೀಕರಿಸಿಕೊಂಡು ಅದರ ಆಧಾರದ ಮೇಲೆ ವಿತರಿಸಲು ಕ್ರಮವಹಿಸುವುದು. ಕೆಲವು ಯಾವುದಾದರೂ ವ್ಯತ್ಯಾಸಗಳು ಕಂಡುಬಂದಂತಹ ಪ್ರಕರಣಗಳಲ್ಲಿ ಮೂಲ ಎ-ಫಾರಂ / ಓಎಂಆರ್‌ಗಳನ್ನು ಪರಿಶೀಲಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಬಹುದು ಎಂಬ ಮಾಹಿತಿಯನ್ನು ಸಭೆಗೆ ನೀಡಿದರು.

ಕುಲಸಚಿವರು ಕುಲಪತಿಗಳು

ಈ ಮೇಲ್ಕಂಡ ವಿಷಯವನ್ನು ಹಾಗೂ ದಿನಾಂಕ: 07.09.2018 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ ತೀರ್ಮಾನದಂತೆ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ಕರಾಮುವಿ/ಆರ್‌ಪಿಎ/56/2018-19ರ ಶೈಕ್ಷಣಿಕ ಮಂಡಳಿ ಸಭೆಯು ಸಮಗ್ರವಾಗಿ ಚರ್ಚಿಸಿತು. ಸದರಿ ಆದೇಶವು ಸಹಭಾಗಿತ್ವ ಸಂಸ್ಥೆಗಳು ನಡೆಸುತ್ತಿರುವ ವಿವಿಧ ಶೈಕ್ಷಣಿಕ ಕ್ರಮಗಳ ಬಗ್ಗೆ ಅನ್ವಯಿಸುತ್ತದೆ ಎಂಬುದನ್ನು ಸಭೆ ಗಮನಿಸಿತು. ವಿಶ್ವವಿದ್ಯಾನಿಲಯ ಇನ್‌ಹೌಸ್ ಶಿಕ್ಷಣ ಕ್ರಮಗಳ ಹಿತದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಯನ್ನು ಬಗೆಹರಿಸಲು ಶೈಕ್ಷಣಿಕ ಮಂಡಳಿ ಸಭೆಯು ಈ ಕೆಳಕಂಡಂತೆ ತೀರ್ಮಾನ ಮಾಡಿತು.

ತೀರ್ಮಾನ : **1996-2010 ರವರೆಗೆ ಇನ್‌ಹೌಸ್ ಶಿಕ್ಷಣಕ್ರಮಗಳ ವಿದ್ಯಾರ್ಥಿಗಳು ಅಂಕಪಟ್ಟಿ ತಿದ್ದುಪಡಿ ಮತ್ತು ಪ್ರಮಾಣಪತ್ರಗಳನ್ನು ವಿತರಿಸುವಾಗ ಪರೀಕ್ಷಾಂಗ ವಿಭಾಗದಲ್ಲಿರುವ Tabulation ledger ಗಳನ್ನು ಆಧಾರವಾಗಿಟ್ಟುಕೊಂಡು ಸೂಕ್ತ ಕ್ರಮ ವಹಿಸಲು ಅನುಮೋದಿಸಲಾಯಿತು.**

ಅಂತಿಮವಾಗಿ 49ನೇ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸೂಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಕುಲಸಚಿವರು ಹಾಗೂ<br>ಸದಸ್ಯ ಕಾರ್ಯದರ್ಶಿಗಳು | ಕುಲಪತಿಗಳು ಹಾಗೂ ಅಧ್ಯಕ್ಷರು |